ಇಟ್ಟುಕೊಂಡು 5 ರಿಂದ 7ನೇ ತರಗತಿಯವರೆಗೂ ಹೆಣ್ಣುಮಕ್ಕಳಿಗೂ ಕೊಡುತ್ತಿರತಕ್ಕಂಥಾದ್ದು. ಸಾಧ್ಯವಾದರೆ ಇದನ್ನು ಪರಿಶೀಲನೆ ಮಾಡಿನೋಡೋಣ.

ಅಧ್ಯಕ್ಷರು : ನೀವು ಒಂದು ಸರ್ಕ್ಯೂಲರ್ ಕಳುಹಿಸಿ. ಬೇರೆ ಮಕ್ಕಳ ತಂದೆತಾಯಿಗಳು ಯಾರು ಇರುತ್ತಾರೆ ಅವರ ಮಕ್ಕಳೂ ಸೇರಿದಂತೆ ಎಲ್ಲರೂ ಒಂದೇ ರೀತಿಯ ಸಮವಸ್ತ್ರ ಹಾಕಿಕೊಂಡು ಬರುವ ಹಾಗೇ ಮಾಡಿ. ಇಲ್ಲದೇ ಇದ್ದರೆ ನೀವು ಅದನ್ನು ಕೊಡದೇ ಇದ್ದರೂ ಚಿಂತೆ ಇಲ್ಲ. ಆ ಬಟ್ಟೆಯನ್ನು ಹಾಕಿಕೊಂಡಾಗ ಇವರು ಇಂತಹವರೇ, ಇಂತಹ ಜಾತಿಯವರೇ ಎಂದು ಗೊತ್ತಾಗುತ್ತದೆ. I am entirely in agreement with him. It has an adverse effect. I am in total agreement with what the hon member says.

ಶ್ರೀ ವಾಟಾಳ್ ನಾಗರಾಜ್ : ಕೊಟ್ಟರೆ ಎಲ್ಲರಿಗೂ ಕೊಡಲಿ. ಇದು ಒಂದು ರೀತಿ ಅಪಹಾಸ್ಯ ಮಾಡಿದಹಾಗೆ ಆಗುತ್ತದೆ.

ಅಧ್ಯಕ್ಷರು : ಆ ಮಕ್ಕಳಿಗೆ ಈಗಿರುವ ಬಡತನ ಶಾಪವೇ ಸಾಕು. ಅದಕ್ಕೆ ಪ್ರಚಾರ ಮಾಡಿ ಹೆಣ್ಣುಮಕ್ಕಳು ಮೇಲೆ ಪರಿಣಾಮ ಆಗುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರಿಗೆ ಎಸ್.ಸಿ.ಪಿ. ಅಮೌಂಟನಿಂದ ಬಟ್ಟೆ ಕೊಡುವಂತಹ ವ್ಯವಸ್ಥೆ ಇದೆ. ಅವರು ಹೇಳಿದ ಹಾಗೆ ವ್ಯತ್ಯಾಸ ಇರುತ್ತದೆ. ಏಕೆಂದರೆ ೨೫ ಹುಡುಗರು ಒಂದು ಯೂನಿಫಾರಂ ಬರುವುದು ಇವರು ಎಸ್.ಸಿ. ಎಂದು ಪಟ್ಟಿ ಹಚ್ಚುವುದು ಬೇಡ. ಆದುದರಿಂದ ಸರ್ಕಾರಿ ಶಾಲೆಯಾಗಿರಲಿ ಅಥವಾ ಖಾಸಗಿಯಾಗಿರಲಿ ಎಲ್ಲರಿಗೂ ಒಂದೇ ರೀತಿಯಾದ ಸಮವಸ್ತ್ರವನ್ನು ಹಾಕಿಕೊಂಡು ಬರಬೇಕೆಂದು ಮಾಡಿ. ಅದರ ಜೊತೆಯಲ್ಲಿ ಯಾವ ಬಣ್ಣದ ಸಮವಸ್ತ್ರವನ್ನು ಫಿಕ್ಸ್ ಮಾಡುತ್ತೀರೋ ಅದೇ ರೀತಿಯ ಯೂನಿಫಾರಂ ಅನ್ನು ನೀವು ಸರ್ಕಾರದಿಂದ ಆ ಮಕ್ಕಳಿಗೆ ಹೊಲಿಸಿ ಕೊಡಿ. ಪ್ರತಿಯೊಂದು ಖಾಸಗಿ ಸ್ಕೂಲ್‌ಗಳಲ್ಲಿ ಅವರದೇ ಆದಂತಹ ಒಂದು ಸಮವಸ್ತ್ರವನ್ನು ಇಟ್ಟುಕೊಂಡಿದ್ದಾರೆ. ಅದೇ ರೀತಿ ನೀವು ಸರ್ಕಾರದವರೂ ಸಹ ಒಂದು ಬಣ್ಣದ ಸಮವಸ್ತ್ರವನ್ನು ಪ್ರಾಥಮಿಕ ಶಾಲೆಗೆ ಫಿಕ್ಸ್ ಮಾಡಿ so that it will help ಆ ರೀತಿ ಮಾಡಿದರೆ ಮನಸ್ಸಿನಲ್ಲಿ ಭಾವನೆ ಕೂಡ ಬರುವುದಿಲ್ಲ. ಆದುದರಿಂದ ಇದನ್ನು ಪರಿಶೀಲನೆ ಮಾಡಿದರೆ ತೊಂದರೆ ಕಡಿಮೆಯಾಗುತ್ತದೆ. ವ್ಯತ್ಯಾಸ ಕೂಡ ಕಂಡುಹಿಡಿಯುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಜಿ. ಗೋವಿಂದೇ ಗೌಡ : ತುಂಬಾ ಉಪಯುಕ್ತವಾದ ಸಲಹೆಯನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಕೂಡಲೇ ಪರಿಶೀಲಿಸುತ್ತೇನೆ.

ಅಂಕೋಲಾದ ಹೊಸ ಆಸ್ಪತ್ರೆ ಕಟ್ಟಡ.

89 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಕೋಲಾ ತಾಲ್ಲೂಕಿನಲ್ಲಿರುವ ಹೊಸ ಆಸ್ಪತ್ರೆ ಕಟ್ಟಡ ಯಾವಾಗ ಪೂರ್ಣಗೊಳ್ಳುತ್ತದೆ? ಹಾಗೂ ಕಟ್ಟಡದ ಕೆಲಸ ಈಗ ಯಾವ ಹಂತದಲ್ಲಿದೆ?

ಆ) ಕಟ್ಟಡದ ಒಟ್ಟು ಅಂದಾಜು ವೆಚ್ಚ ಎಷ್ಟು? ಹಾಗೂ ಇಲ್ಲಿಯವರೆವಿಗೆ ಖರ್ಚಾಗಿರುವ ಹಣವೆಷ್ಟು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಆಸ್ಪತ್ರೆ ಕಟ್ಟಡ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದ್ದು, 1996-97ನೇ ಸಾಲಿನ ಅಂತ್ಯದಲ್ಲಿ ಪೂರ್ಣಗೊಳ್ಳಲಿದೆ.

ಆ) 12 ಲಕ್ಷ ರೂ.ಗಳು. ರೂ. 24,75,035-00 ಜನವರಿ 96 ಅಂತ್ಯದವರೆಗೆ ಖರ್ಚಾಗಿರುತ್ತದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದ ಒಂದು ಪ್ರಮುಖ ಪತ್ರಿಕೆಯಲ್ಲಿ ನನ್ನ ಅಂಕೋಲ ಕ್ಷೇತ್ರದ ಬಗ್ಗೆ ಒಂದು ವರದಿ ಬಂದಿರುವುದನ್ನು ನೋಡಿದೆ. ಅದರಲ್ಲಿ ಯಾವ್ಯಾವ ಆರೋಗ್ಯ ಕೇಂದ್ರಗಳಲ್ಲಿ ಪ್ರಾಥಮಿಕ ಸೌಲಭ್ಯಗಳು ಇಲ್ಲ ಎನ್ನುವುದನ್ನು ಬಂದಿದೆ. ಅಲ್ಲಿ ಆಸ್ಪತ್ರೆಗಳು ಅಂದಾಜು ಮಾಡಿರುವ ವೆಚ್ಚ 12 ಲಕ್ಷ ರೂಪಾಯಿ. ಆದರೆ ಜನವರಿ 1996ರವರೆಗೆ ಖರ್ಚಾಗುವುದು 24 ಲಕ್ಷದ 75 ಸಾವಿರ ರೂಪಾಯಿ. ನಮಗೆ ಎಷ್ಟು ವರ್ಷದಿಂದ ಅಲ್ಲಿ ಆಸ್ಪತ್ರೆ ಕಟ್ಟಡ ನಡೆಯುತ್ತಿದೆ ಎನ್ನುವಂತಾದ್ದು ಇದರೊಳಗೇ ಅರ್ಥವಾಗುತ್ತದೆ. ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆಯೆಂದರೆ, ಆಸ್ಪತ್ರೆ ಸರಿ ಇಲ್ಲದೆ ಇರುವುದರಿಂದ ರಸ್ತೆ ಪಕ್ಕಗಳಲ್ಲೇ ಶವವನ್ನು ಇಟ್ಟುಕೊಂಡು ಶವ ಪರೀಕ್ಷೆಮಾಡುತ್ತಿದ್ದಾರೆ. ಆ ರಸ್ತೆ ವಿದ್ಯಾರ್ಥಿಗಳು ಓಡಾಡುವಂತಹ ರಸ್ತೆ. ಹಾಗೂ ಸಾಮಾನ್ಯ ಜನರು ಓಡಾಡುವಂತಹ ರಸ್ತೆ. ಅಲ್ಲಿ ಒಂದು ಪೋಸ್ಟ್ ಮಾರ್ಟಮ್ ರೂಂ ಸಹ ಇಲ್ಲ. ಆ ಆಸ್ಪತ್ರೆಯನ್ನು ಮುಗಿಸುವುದಕ್ಕೆ ಸರ್ಕಾರಕ್ಕೆ ಕಾಳಜಿ ಇಲ್ಲ ಎನ್ನುವಂತಾದ್ದು ನಮಗೆ ಸ್ಪಷ್ಟವಾಗಿದೆ. ಕೊನೆಯ ಪಕ್ಷ ನನ್ನ ಕಾಳಜಿ ಏನೆಂದರೆ ಒಂದು ಅಥವಾ 2 ತಿಂಗಳ ಒಳಗೆ ಒಂದು ಪೋಸ್ಟ್ ಮಾರ್ಟಂ ರೂಂ ಆದರೂ ಕಟ್ಟಿಕೊಡಲಿ. ಅಲ್ಲಿಯ ಜನ ಹಿಂಸೆ ಪಡುತ್ತಿದ್ದಾರೆ. ಅಲ್ಲಿ ಶವವನ್ನು ರಸ್ತೆ ಬದಿಗೆ ಇಟ್ಟುಕೊಂಡು ಕೊಯ್ಯುವಂತಹ ದೃಶ್ಯ ನೋಡಿದ್ದೇನೆ. ಅದನ್ನು ಶಾಲೆಗೆ ಹೋಗುವಂತಹ ಮಕ್ಕಳು ನೋಡುತ್ತಿದ್ದಾರೆ. ಪೋಸ್ಟ್ ಮಾರ್ಟಂ ರೂಮನ್ನು ತಕ್ಷಣ ಕಟ್ಟಿಸಿಕೊಡಲಿ. ಆ ಆಸ್ಪತ್ರೆ ಯಾವಾಗ ಆಗುತ್ತದೆ ಎಂದು ನಮಗೆ ಗೊತ್ತಿದೆ. ಸರ್ಕಾರ ಜವಾಬ್ದಾರಿ ತೆಗೆದುಕೊಂಡು ಮಾಡುತ್ತದೆಯೇ ಎಂಬುದನ್ನು ಹೇಳಬೇಕು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಒಟ್ಟು ಅಂದಾಜು ವೆಚ್ಚ 42 ಲಕ್ಷ. ಈ 42 ಲಕ್ಷದಲ್ಲಿ 24.75 ಲಕ್ಷ ರೂಪಾಯಿ ಖರ್ಚಾಗಿದೆ. ಇದೀಗ ಮುಕ್ತಾಯ ಹಂತದಲ್ಲಿದೆ. 97ನೇ ಮಾರ್ಚಿಯೊಳಗೆ ಈ ಕೆಲಸವನ್ನು ಮುಗಿಸುತ್ತಾರೆ. ಎರಡನೆಯದು ತಾವು ಕೇಳಿರತಕ್ಕಂಥ ಶವ ಪರೀಕ್ಷಾ ಕೇಂದ್ರ. ಬಹುಶಃ ಈ ಪ್ಲಾನ್ ಒಳಗಡೆ ಇದನ್ನು ಅಳವಡಿಸಿದ್ದಾರೆಯೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಅದನ್ನು ಇಲಾಖೆಯ ಅಧಿಕಾರಿಗಳಿಗೆ ಹೇಳಿ ಅಳವಡಿಸಿದೆ ಇದ್ದರೂ

ಕೂಡ ಈ ಪ್ಲಾನ್ ಒಳಗಡೆ ಆ ಶವ ಪರೀಣಾ ಕೇಂದ್ರವನ್ನು ಅಳವಡಿಸುವುದಕ್ಕೆ ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ನಾವು ಸೂಚನೆಯನ್ನು ಕೊಡುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಈಗ ಕಟ್ಟುತ್ತಿರುವಂಥ ಆಸ್ಪತ್ರೆಯ ಕಟ್ಟಡದ ಒರಿಜನಲ್ ಪ್ಲಾನಸಲ್ಲಿ ಶವ ಪರೀಕ್ಷಣಾ ಕೇಂದ್ರದ ಕೊಠಡಿ ಇದೆ. ಆದರೆ ಕಳೆದ ಅನೇಕ ವರ್ಷಗಳಿಂದ ಕಟ್ಟಡದ ಕೆಲಸ ಮಂದಗತಿಯಲ್ಲಿ ಸಾಗುತ್ತಿದ್ದು ಬಹಳ ನೆನೆಗುದಿಗೆ ಬಿದ್ದಿದೆ. ಈ ಕಟ್ಟಡ ಪೂರ್ಣವಾಗುವುದಕ್ಕೆ ಇನ್ನೂ 4-5 ವರ್ಷಗಳು ಆಗಬಹುದು. ಹಾಗಾಗಿ ಆ 4-5 ವರ್ಷಗಳ ಕಾಲ ರಸ್ತೆಯ ಬದಿಯಲ್ಲೆ ಶವ ಪರೀಕ್ಷೆಯನ್ನು ಮಾಡುವುದು ಎಂದರೆ ಬಹಳ ದುಸ್ತರವಾದಂಥ ಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಶವ ಪರೀಕ್ಷೆ ಕೊಠಡಿಯನ್ನಾದರೂ ಬೇಗನೆ ಕಟ್ಟಿಸುವ ಬಗ್ಗೆಯಾದರೂ ಯೋಚನೆ ಮಾಡಬೇಕು.

ಶ್ರೀ ಎಂ. ಸಿ. ನಾಣಯ್ಯ : ತಾವು ಹೇಳಿದಹಾಗೆ ಈ ಶವ ಪರೀಕ್ಷೆಯ ಕೊಠಡಿಯೂ ಕೂಡ ಈ ಪ್ಲಾನಿನ ಒಳಗಡೆ ಇರುವುದರಿಂದ ಆ ಕಟ್ಟಡವನ್ನು ಬೇಗ ಕಟ್ಟುವುದಕ್ಕೆ ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಬೇಗೆ ಎಂದರೆ ಯಾವಾಗ?

SRI M.C. NANAIAH : I really share your concern. I will see that instructions are issued to the Engineers see postmortem block is taken up immediately along with other work.

MR. SPEAKER : It is more of auguish than the concern.

ಬೀಳಗಿ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾದಳಗಿಯಲ್ಲಿ 30 ಹಾಸಿಗೆಯುಳ್ಳ ಆಸ್ಪತ್ರೆ.

90 - ಶ್ರೀ ಜೆ.ಪಿ. ಪಾಟೀಲ್ (ಬೀಳಗಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ 30 ಹಾಸಿಗೆ ಆಸ್ಪತ್ರೆ ಬೇಡಿಕೆ ಜನರಿಂದ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಾವಳಗಿ ಕನಿಷ್ಟ 15 ಸಾವಿರ ಜನಸಂಖ್ಯೆ ಹೊಂದಿರುವುದಲ್ಲದೆ ಸುತ್ತಮುತ್ತಲು ಕನಿಷ್ಟ 20-25 ಹಳ್ಳಿಗಳು ಈ ದವಾಖಾನೆಯ ಮೇಲೆ ಅವಲಂಭಿತವಾಗಿರುವುದು ಸರ್ಕಾರದ ಗಮನಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗೆ ಮೇಲ್ದರ್ಜೆಗೇರಿಸಲು ಕೈಗೊಂಡಿರುವ ಕ್ರಮಗಳೇನು? ಇದೇ 1996-97ನೇ ಸಾಲಿನಲ್ಲಿಯೇ ಮಂಜೂರು ಮಾಡಲಾಗುವುದೇ?